OS No. 49/2021

PW-2

**(ಇಂದು ದಿಃ 30-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- 1 ರಿಂದ 3ನೇ ಪ್ರತಿವಾದಿ ಪರ ಶ್ರೀ. ಟಿ.ವಿ.ಪಿ. ವಕೀಲರಿಂದಃ-**

ನನ್ನ ಊರು ಮಳಿಖೇಡ. ವಾದಿ ಈ ದಾವೆಯನ್ನು ಜಮೀನು ಸಲುವಾಗಿ ಸಲ್ಲಿಸಿದ್ದಾರೆ. ವಾದಿ ಸಾಬಣ್ಣನ ಮಗ. ಸಾಬಣ್ಣನಿಗೆ 5 ಜನ ಮಕ್ಕಳು. ಅವರುಗಳೆಂದರೆ ಈರಣ್ಣ ಬಸವರಾಜ, ಮಲ್ಲಿಕಾರ್ಜುನ, ಸಿದ್ರಾಮಪ್ಪ, ಶಾಮು. ಇಬ್ಬರು ಹೆಣ್ಣು ಮಕ್ಕಳು ಅವರುಗಳ ಹೆಸರು ನೆನಪಿಲ್ಲ, ಸಾಬಣ್ಣನಿಗೆ ಎಷ್ಟು ಜಮೀನುಗಳು ಇದ್ದವು ನನಗೆ ಗೊತ್ತಿಲ್ಲ, ಸಾಬಣ್ಣರವರ ಹಿರಿಯರ ಜಮೀನುಗಳಲ್ಲಿ ಭಾಗ ಆದ ಬಗ್ಗೆ ನನಗೆ ಗೊತ್ತಿಲ್ಲ, ವಾದಿ ನನ್ನ ಸಂಬಂಧಿ ಅಲ್ಲ, ವಾದಿ ಪ್ರತಿವಾದಿಯರು ಬಹಳ ವರ್ಷಗಳಿಂದ ಬೇರೆ ಬೇರೆ ವಾಸವಾಗಿದ್ದಾರೆ ಎಂದರೆ ಸರಿ. ಅವರು ವ್ಯವಹಾರ ಬೇರೆ ಬೇರೆ ಮಾಡುತ್ತಾರೆ ಎಂದರೆ ಸರಿ. ನನಗೆ ಸಾಬಣ್ಣನ ಕುಟುಂಬಸ್ಥರ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ, ನನಗೆ ಯಾವುದೇ ಮಾಹಿತಿ ಇಲ್ಲದಿದ್ದರು ವಾದಿ ಮಾತು ಕೇಳಿಕೊಂಡು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ,

**(4 ರಿಂದ 6ನೇ ಪ್ರತಿವಾದಿಯರು ಪ್ರತಿವಾದ ಪತ್ರ ಸಲ್ಲಿಸದೆ ಇರುವ ಕಾರಣಕ್ಕೆ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು)**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**

OS No. 49/2021

PW-2